ಮುಂಜಾನೆ ಮಾತು
ಅಂಗೈಯಲ್ಲಿ ಇರುವ ರೇಖೆಗಳನ್ನು ಅದೃಷ್ಟದ ರೇಖೆಗಳೆನ್ನುತ್ತ ಅವುಗಳ ಅರ್ಥ ಹುಡುಕುತ್ತ ಕಾಲ ಕಳೆಯುವುದು ಬೇಡ. ಅಂಗೈ ಇಲ್ಲದವರೂ ಸುಂದರ ಜೀವನ ಸಾಗಿಸಿದ ಉದಾಹರಣೆಗಳಿವೆ.

ವಿಜಯವಾಣಿ 1*
ಕನ್ನಡಿಗರ ಧ್ವನಿ
ಕನ್ನಡ ದಿನಪತ್ರಿಕೆ

ಬೆಂಗಳೂರು ಮಂಗಳೂರು ಹುಬ್ಬಳ್ಳಿ ವಿಜಯಪುರ ಮೈಸೂರು ಗಂಗಾವತಿ ಚಿತ್ರದುರ್ಗ ಶಿವಮೊಗ್ಗ ಕಲಬುರಗಿ ಬೆಳಗಾವಿ
VIJAYAVANI ● MANGALURU
ಮಂಗಳೂರು ● ಸಂಪುಟ 6 ● ಸಂಚಿಕೆ 309
vijayavani.net ಇ-ಪೇಪರ್: epapervijayavani.in VVani4U @VVANI4U vijayavaninews@gmail.com ಸಹಾಯವಾಣಿ: 8884411682
6 ಫೆಬ್ರವರಿ 2018 | ಮಂಗಳವಾರ 6 FEB

Sahyadri College of Engineering & Management
CENTRAL LIBRARY
Adyar, Mangaluru-7



# ಬಿಜೆಪಿ ಸುಳ್ಳು ಕುರಿತು ಜನರಲ್ಲಿ ಜಾಗೃತಿ

## ಕಾರ್ಯಕರ್ತರಿಗೆ ಕಾಂಗ್ರೆಸ್ ಮುಖಂಡ ಮಂಜುನಾಥ ಭಂಡಾರಿ ಸಲಹೆ

**ಉಡುಪಿ:** ಬಿಜೆಪಿ ಒಂದು ಸುಳ್ಳನ್ನು ಸಾವಿರ ಬಾರಿ ಹೇಳಿ ಸತ್ಯವೆಂದು ಬಿಂಬಿಸುವ ಪ್ರಯತ್ನ ಮಾಡುತ್ತಿದೆ. ಸಾಮಾಜಿಕ ಜಾಲತಾಣಗಳಲ್ಲಿ ಬಿಜೆಪಿಯ ಸುಳ್ಳು ಸುದ್ದಿಗಳನ್ನು ಎದುರಿಸಬೇಕು, ಇದು ಪಕ್ಷದ ಕಾರ್ಯಕರ್ತರ ಜವಾಬ್ದಾರಿ ಎಂದು ಕೆಪಿಸಿಸಿ ಉಪಾಧ್ಯಕ್ಷ ಹಾಗೂ ಜಿಲ್ಲಾ ವೀಕ್ಷಕ ಮಂಜುನಾಥ ಭಂಡಾರಿ ಹೇಳಿದರು.



ನಗರದ ಬ್ರಹ್ಮಗಿರಿ ಕಾಂಗ್ರೆಸ್ ಭವನದಲ್ಲಿ ಸೋಮವಾರ ಜಿಲ್ಲಾ ಕಾಂಗ್ರೆಸ್ ಸಮಿತಿ ಪದಾಧಿಕಾರಿಗಳು, ಜಿಲ್ಲೆಯ ವಿವಿಧ ಘಟಕಗಳ ಅಧ್ಯಕ್ಷರು, ಬ್ಲಾಕ್ ಅಧ್ಯಕ್ಷರು ಮತ್ತು ವೀಕ್ಷಕರು ಹಾಗೂ ಚುನಾಯಿತ ಜನಪ್ರತಿನಿಧಿಗಳ ಸಭೆಯಲ್ಲಿ ಮಾತನಾಡಿದರು.

ಬಿಜೆಪಿ ಧರ್ಮದ ಹೆಸರಿನಲ್ಲಿ ವಿಷಬೀಜ ಬಿತ್ತುವ ಕೆಲಸ ಮಾಡುತ್ತಿದೆ. ಈ ನಿಟ್ಟಿನಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಪಕ್ಷದ ವಿಚಾರಧಾರೆ ಜನರ ಮುಂದಿಟ್ಟು ಮತ ಯಾಚಿಸಬೇಕು. ಜನರ ಬಳಿಗೆ ಹೋಗಿ ಜಾಗೃತಿ ಮೂಡಿಸುವ ಕೆಲಸ ಮಾಡಬೇಕು ಎಂದರು.

ಕಾಂಗ್ರೆಸ್ ಜಿಲ್ಲಾಧ್ಯಕ್ಷ ಜನಾರ್ದನ ತೋನ್ಸೆ, ಎಂ.ಎ.ಗಫೂರ್, ಜಿ.ಎ.ಬಾವ, ದೇವಿಪ್ರಸಾದ್ ಶೆಟ್ಟಿ, ನವೀನ್‌ಚಂದ್ರ ಶೆಟ್ಟಿ, ವರೋನಿಕಾ ಕರ್ನೇಲಿಯೊ, ದಿನೇಶ್ ಪುತ್ರನ್, ಅಶೋಕ್ ಕೊಡವೂರು, ಸತೀಶ್ ಅಮೀನ್ ಪಡುಕೆರೆ, ರೋಶಿನಿ ಒಲಿವೇರಾ, ಗಣೇಶ್ ಕೋಟ್ಯಾನ್, ಸುರೇಶ್ ನಾಯ್ಕ್, ಶಂಕರ್ ಕುಂದರ್, ಶ್ಯಾಮಲಾ ಭಂಡಾರಿ, ನೀರೆ ಕೃಷ್ಣ ಶೆಟ್ಟಿ, ಶಶಿಧರ್ ಶೆಟ್ಟಿ, ವಂಡ್ಸೆ ಸಂಜೀವ ಶೆಟ್ಟಿ, ಮನೋಹರ್ ಕರ್ಕೇರ ಇದ್ದರು. ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ನರಸಿಂಹಮೂರ್ತಿ ವರದಿ ವಾಚಿಸಿದರು. ಹರೀಶ್ ಕಿಣಿ ನಿರೂಪಿಸಿದರು.